(SRI H. S. METGUD)

at least to make temporary housing arrangements for these people who have lost their houses?

**Sri R. CHENNIGARAMIAH.**—Yes.

**Sri H. S. METGUD.**—What arrangements have been made by the Corporation ?

**Sri R. CHENNIGARAMIAH.**—Some sheds have been put up. The details are not available with me. I shall make enquiry.

**Sri H. S. METGUD.**—Will the Hon'ble Minister inform the House as to how many persons have been at least temporarily housed ?

**Sri R. CHENNIGARAMIAH.**—I require notice.

**Sri H. S. METGUD.**—The Hon'ble Minister said that Government has asked the Corporation to make temporary arrangements. Has the Corporation replied to say that it has made those arrangements ?

**Sri R. CHENNIGARAMIAH.**—My information is that they have made some arrangements, but the details are not available.

---

## Programmes for Economic and Social Development of Harijans

*Q.*—139. **Sri T. HANUMIAH** (Hiriyur—Scheduled Castes).—

Will the Government be pleased to state :—

(*a*) the several programmes relating to economic and social development of Harijans included and carried out successfully under the First and the Second Five-Year Plans in the State;

(*b*) the total amount provided for the First and Second Five-Year Plans of the State; out of that the amount spent for the financial and social, educational and economic upliftment of these people;

(*c*) whether the schemes will be placed on the Table ?

*A.*—**Sri R. CHENNIGARAMIAH** (Minister for Local Self-Government).—

(*a*) The programmes that were carried out successfully during the First Five-Year Plan in the old State of Mysore and continued during the Second Five-Year Plan are as follows :—

1 Housing of Scheduled Castes.

2 Education :

(a) Stipends to trainees in Cottage Industries;

(b) Hostel Buildings.

3 Economic Aid to Agriculture and Poultry, Tannery, etc.

4 Drinking water wells.

5 Community Centres and Radio Listening sets.

6 Aid to Districts, Taluk and other organisations for Removal of Untouchability.

7 Propaganda and Publicity (Harijan Day, Inter-Caste Dinners, Holding of Melas, etc.)

(*b*) As the schemes were lately included under the First Five-Year Plan, the budgetary provisions were made annually during the said period, as follows :—

| *Year* | *Provision* | *Total expenditure* |
|---|---|---|
| | Rs. | Rs. |
| 1953-54 ... | 3,25,000 | 49,014 |
| 1954-55 ... | 7,46,000 | 4,74,839 |
| 1955-56 ... | 5,81,250 | 3,96,668 |

The provision for the Second Five-Year Plan is Rs. 1,63,40,000 and the expenditure incurred up to end of September 1956 on the schemes is Rs. 3,39,040.

Expenditure incurred under several kinds of upliftment (up to end of September 1956).

| | | Rs. |
|---|---|---|
| 1 | Financial ... | 6,87,075 |
| 2 | Social ... | 4,00,157 |
| 3 | Educational ... | 1,481 |
| 4 | Economic ... | 1,70,848 |

(*c*) A copy of the Second Five-Year Plan is placed on the Table of the House.

ಶ್ರೀ ಟಿ. ಹನುಮಯ್ಯ.—ಸ್ವಾಮಿ, ಮೊದಲನೆಯ ಪ್ರಶ್ನೆಗೆ ಉತ್ತರವಾಗಿ ಮೊದಲನೆಯ ಪಂಚ ವಾರ್ಷಿಕ ಯೋಜನೆಯಲ್ಲಿ ಹರಿಜನರ ಅಭಿವೃದ್ಧಿಗಾಗಿ ವಾಸದ ಮನೆಗಳನ್ನು ಒದಗಿಸುವುದು, ಶಿಕ್ಷಣ ವೇತನಗಳನ್ನು ಕೊಡುವುದೇ ಇತ್ಯಾದಿ 7 ಬಾಬುಗಳನ್ನು ನಮೂದು ಮಾಡಿದ್ದೀರಿ. ಇವು ಮೊದಲಿನಿಂದಲೂ

ನಡೆಯುತ್ತಿದ್ದುವುಗಳೇ ಅಥವಾ ಹೊಸದಾಗಿ ಕೈಕೊಂಡಿರತಕ್ಕವೇ ?

* ಶ್ರೀ ಆರ್. ಚೆನ್ನಿಗರಾಮಯ್ಯ.—ಮೊದಲಿನಿಂದ ನಡೆದುಕೊಂಡು ಬಂದಿದ್ದುವನ್ನೇ ಪಂಚ ವಾರ್ಷಿಕ ಯೋಜನೆಯಲ್ಲೂ ಸೇರಿಸಿಕೊಂಡಿದೆ.

ಶ್ರೀ ಟಿ. ಹನುಮಯ್ಯ.—ಇದಕ್ಕಾಗಿ ಎಷ್ಟು ಹಣ ಒದಗಿಸಿದ್ದೀರಿ ?

ಶ್ರೀ ಆರ್. ಚೆನ್ನಿಗರಾಮಯ್ಯ.—ವಿವರಗಳನ್ನು ಉತ್ತರದಲ್ಲೇ ಕೊಟ್ಟಿದೆ : 1953-54ರಲ್ಲಿ 3,25,000, 1954-55ರಲ್ಲಿ 7,46,000, 1955-56ರಲ್ಲಿ 5,81,250 ರೂಪಾಯಿಗಳು.

ಶ್ರೀ ಟಿ. ಹನುಮಯ್ಯ.—ಒಟ್ಟು ಮೊದಲನೆ ಪಂಚ ವಾರ್ಷಿಕ ಯೋಜನೆಗೆ ಎಷ್ಟು ಹಣ ಒದಗಿಸಿದ್ದೀರಿ ?

ಶ್ರೀ ಆರ್. ಚೆನ್ನಿಗರಾಮಯ್ಯ.—ಅದು ಇಲ್ಲಿಗೆ ಸಂಬಂಧಪಟ್ಟಿಲ್ಲ.

ಶ್ರೀ ಟಿ. ಹನುಮಯ್ಯ.—1953-54ರಲ್ಲಿ 3,25,000 ರೂಪಾಯಿಗಳನ್ನು ಒದಗಿಸಿದ್ದರೂ ಕೇವಲ 49,000 (ಚಿಲ್ಲರೆ)—ಬಹಳ ಕಡಮೆ ಹಣ ಖರ್ಚು ಮಾಡಿದ್ದೀರಲ್ಲಾ, ಜನರೇ ಕೇಳಲಿಲ್ಲವೋ ಅಥವಾ ನೀವು ಕೊಡಲಿಲ್ಲವೋ ?

ಶ್ರೀ ಆರ್. ಚೆನ್ನಿಗರಾಮಯ್ಯ.—ಆ ವಿವರ ಬೇಕಾದರೆ ವಿಚಾರಮಾಡಿ ಹೇಳುತ್ತೇನೆ.

Sri T. ANANTHA PAI.—May I know the reasons for the expenditure falling short of provisions made every year ?

Sri R. CHENNIGARAMIAH.—Due to various reasons.

ಶ್ರೀ ಜಿ. ದುಗ್ಗಪ್ಪ.—ಮೊದಲನೆಯ ಪಂಚ ವಾರ್ಷಿಕ ಯೋಜನೆಯಲ್ಲಿ ಈ ಎಲ್ಲ ಕಾರ್ಯ ಕ್ರಮಗಳಿಗೂ ಒಟ್ಟು ಎಷ್ಟು ಹಣವನ್ನು ಮೀಸಲಾಗಿಟ್ಟಿದ್ದಿರಿ ?

ಅಧ್ಯಕ್ಷರು.—ಇಲ್ಲೇ ಕೊಟ್ಟಿದೆ.

ಶ್ರೀ ಜಿ. ದುಗ್ಗಪ್ಪ.—ಪೂರಾ ಪ್ಲಾನ್ ಪೀರಿಯಡ್ಡಿಗೆ ಎಷ್ಟು ಹಣ ?

ಶ್ರೀ ಆರ್. ಚೆನ್ನಿಗರಾಮಯ್ಯ.—1,63,40,000 ಎಂದು ಇಲ್ಲೇ ಕೊಟ್ಟಿದೆ.

ಅಧ್ಯಕ್ಷರು.—ಅದು ಎರಡನೆಯ ಪಂಚವಾರ್ಷಿಕ ಯೋಜನೆಗೆ. ಅವರು ಕೇಳಿದ್ದು ಮೊದಲನೆಯ ಪಂಚ ವಾರ್ಷಿಕ ಕಾಲಕ್ಕೆಷ್ಟು ? ಎಂದು.

ಶ್ರೀ ಆರ್. ಚೆನ್ನಿಗರಾಮಯ್ಯ.—ಇಲ್ಲೇ ಉತ್ತರದಲ್ಲಿ ಕೊಟ್ಟಿದೆ. ಅದನ್ನು ಕೂಡಿದರೆ ಒಟ್ಟು ಗೊತ್ತಾಗುತ್ತದೆ.

ಶ್ರೀ ಜಿ. ದುಗ್ಗಪ್ಪ.—ಇಲ್ಲಿ ಒಟ್ಟು 9,20,521 ರೂಪಾಯಿಗಳನ್ನು ಖರ್ಚು ಮಾಡಿರುವುದಾಗಿ ಹೇಳಿದ್ದೀರಿ. ನಾನು ಕೇಳಿದ್ದು ಒಟ್ಟು 5 ವರ್ಷದ ಪ್ಲಾನ್ ಪೀರಿಯಡ್ಡಿಗೆ ಎಷ್ಟು ಹಣ ಒದಗಿಸಿದ್ದಿರಿ ಎಂದು.

Mr. SPEAKER.—The reply is quite clear.

ಶ್ರೀ ಜಿ. ದುಗ್ಗಪ್ಪ.—ಪಂಚವಾರ್ಷಿಕ ಯೋಜನೆ ಐದು ವರ್ಷ ಕಾಲದ್ದಾದರೂ, ತಾವು ಹರಿಜನ ಉದ್ಧಾರಕ್ಕಾಗಿ ಏನು ಸ್ಕೀಮ್ ಹಾಕಿದ್ದಿರೋ ಅದರ ಬಗ್ಗೆ ಮೂರು ವರ್ಷಗಳಿಗೆ ಮಾತ್ರತಾನೆ ಒದಗಿಸಿರುವುದು ?

ಶ್ರೀ ಆರ್. ಚೆನ್ನಿಗರಾಮಯ್ಯ.—ಮೂರು ವರ್ಷಕ್ಕೇ ನಿಂತು ಹೋಗುವುದಿಲ್ಲ. ಮುಂದಕ್ಕೂ ಅದು ಒದಗಿ ಬರುತ್ತದೆ.

ಶ್ರೀ ಜಿ. ದುಗ್ಗಪ್ಪ.—ತಾವು ಐದು ವರ್ಷಕ್ಕೆ ಪ್ಲಾನ್ ಮಾಡಿದ್ದರೂ ಮೂರು ವರ್ಷಕ್ಕೆ ತಾನೆ ದುಡ್ಡು ಒದಗಿಸಿರುವುದು ?

ಅಧ್ಯಕ್ಷರು.—ಉತ್ತರದಲ್ಲೇ ಅದನ್ನು ಸ್ಪಷ್ಟವಾಗಿ ತಿಳಿಸಿದೆ.

Sri G. DUGGAPPA.—May I know why the first two years were left out ?

Sri R. CHENNIGARAMIAH.—The amelioration works in the first two years of the Five-Year Plan were carried out under the executive order of the Government.

ಶ್ರೀ ಜಿ. ದುಗ್ಗಪ್ಪ.—ದ್ವಿತೀಯ ಪಂಚವಾರ್ಷಿಕ ಯೋಜನೆಯಲ್ಲಿ 1,63,40,000 ರೂಪಾಯಿಗಳನ್ನು ಒದಗಿಸಿರುವುದಾಗಿ ಹೇಳಿದ್ದೀರಿ ; ಇದು ಮೊದಲನ ಮೈಸೂರಿಗೆ ಅನ್ವಯಿಸಿದಂತಿದೆಯೋ ಅಥವಾ ವಿಶಾಲ ಮೈಸೂರನ್ನೂ ಒಳಗೊಂಡಿದೆಯೋ ?

ಶ್ರೀ ಆರ್. ಚೆನ್ನಿಗರಾಮಯ್ಯ.—ಬಹುಮಟ್ಟಿಗೆ ಮೊದಲನ ಮೈಸೂರಿಗೆ ಸಂಬಂಧಪಟ್ಟಿದ್ದಾಗಿದೆ.

ಶ್ರೀ ಜಿ. ದುಗ್ಗಪ್ಪ.—ಹೊಸದಾಗಿ ಸೇರಿರತಕ್ಕ ಕೊಡಗು, ಬೊಂಬಾಯಿ, ಹೈದರಾಬಾದು ಪ್ರದೇಶಗಳ ಬಗ್ಗೆ ಏನೇನು ಕಾರ್ಯಕ್ರಮಗಳನ್ನು ಕೈಗೊಂಡಿದ್ದೀರಿ ?

ಶ್ರೀ ಆರ್. ಚೆನ್ನಿಗರಾವ ಯ್ಯ.—ಆಯಾ ಪ್ರಾಂತ ಸರ್ಕಾರಗಳು ಇಲ್ಲಿನಂತೆಯೇ ಪಂಚವಾರ್ಷಿಕ ಯೋಜನೆಗಳನ್ನು ಮಾಡಿದ್ದಾರೆ. ಅವುಗಳನ್ನು ನಮ್ಮದರ ಜೊತೆ ಸೇರಿಸಿಕೊಂಡು ಮಾಡಲಾಗುತ್ತದೆ.

ಶ್ರೀ ಜಿ. ದುಗ್ಗಪ್ಪ.—ಅವೂ ಸೇರಿ ಎಷ್ಟು ದುಡ್ಡಾಗುತ್ತದೆ ?

ಶ್ರೀ ಆರ್. ಚೆನ್ನಿಗರಾಮಯ್ಯ.—ನೋಟೀಸ್ ಬೇಕು.

ಶ್ರೀ ಎಂ. ಚಿಕ್ಕಲಿಂಗಯ್ಯ.—ಇಲ್ಲಿ ಮೂರು ವರ್ಷಕ್ಕೆ ಕೊಟ್ಟಿರುವ ಹಣ ತಿಳಿಸಿದ್ದೀರಿ. ಇದು ವಾಸ್ತವವಾಗಿ ಬಡ್ಜೆಟ್ಟಿನಲ್ಲಿ ಕೊಟ್ಟಿರುವುದೆ ? ಪ್ರಾಂತಸರ್ಕಾರ ಕೊಟ್ಟಿರುವುದೂ ಇದರಲ್ಲಿ ಸೇರುತ್ತದೆಯೇ ?

ಶ್ರೀ ಆರ್. ಚೆನ್ನಿಗರಾಮಯ್ಯ.—ನೋಟೀಸ್ ಬೇಕು.

ಶ್ರೀ ಎಂ. ಚಿಕ್ಕಲಿಂಗಯ್ಯ —ಇಲ್ಲಿ 3 ಲಕ್ಷ, 7 ಲಕ್ಷ, 8 ಲಕ್ಷ ಎಂದು ಮೂರು ವರ್ಷ ಹಣ ಕೊಟ್ಟಿದ್ದೀರಲ್ಲಾ, ಇದು ಯಾವಯಾವ ಬಾಬುಗಳಿಗೆ ಕೊಟ್ಟಿರುವುದಾಗಿದೆ?

ಶ್ರೀ ಆರ್. ಚೆನ್ನಿಗರಾಮಯ್ಯ.—ಮೇಲೆ ಕೊಟ್ಟಿರುವ ಎಲ್ಲಾ ಬಾಬುಗಳಿಗೂ ಸಂಬಂಧಪಟ್ಟಿದೆ.

ಶ್ರೀ ಎಂ. ಚಿಕ್ಕಲಿಂಗಯ್ಯ.—ಇದು ಮೈಸೂರು ಸರ್ಕಾರದವರು ಕೊಟ್ಟಿರುವುದೇ ಅಥವಾ ಕೇಂದ್ರ ಸರ್ಕಾರದವರು ಕೊಟ್ಟಿರುವ ಸಹಾಯ ದ್ರವ್ಯವೇ ?

ಶ್ರೀ ಆರ್. ಚೆನ್ನಿಗರಾಮಯ್ಯ.—ನೋಡಿ ಹೇಳುತ್ತೇನೆ.

ಶ್ರೀ ಎಂ. ಚಿಕ್ಕಲಿಂಗಯ್ಯ.—ಎರಡನೆಯ ಪಂಚ ವಾರ್ಷಿಕ ಯೋಜನೆಯಲ್ಲಿ 1,63,40,000 ರೂಪಾಯಿಗಳನ್ನು ಕೊಟ್ಟಿದೆಯೆಂದು ಹೇಳಿದ್ದೀರಲ್ಲಾ, ಇದರಲ್ಲಿ ಕೇಂದ್ರ ಸರ್ಕಾರದಿಂದ ಬರುವುದೆಷ್ಟು, ಸಂಸ್ಥಾನದ ಸರ್ಕಾರದವರು ಒದಗಿಸುವುದೆಷ್ಟು ?

ಶ್ರೀ ಆರ್. ಚೆನ್ನಿಗರಾಮಯ್ಯ.—ನೋಡಿ ಹೇಳಬೇಕು.

ಶ್ರೀ ಜೆ. ಎಲ್. ಕಬಾಡಿ.—(a) ಪ್ರಶ್ನೆಯ ಉತ್ತರದಲ್ಲಿ (3)ನೆಯ ಬಾಬಿನಲ್ಲಿ ವ್ಯವಸಾಯ, ಕೋಳಿ ಸಾಕುವುದು, ಚರ್ಮ ಹದ ಮಾಡುವುದು—ಮುಂತಾದುವು ಎಂದು ಹೇಳಿದ್ದೀರಿ. ಚರ್ಮದ ಕೈಗಾರಿಕೆಯೂ ಇದರಲ್ಲಿ ಸೇರಿದೆಯೇ ?

ಶ್ರೀ ಆರ್. ಚೆನ್ನಿಗರಾಮಯ್ಯ. – ನೇರಿದೆ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ತಾವು ಹಣ ಕೊಟ್ಟಿರುವುದು ಯಾವಯಾವ ಜಿಲ್ಲೆಗೆ ಎಷ್ಟೆಷ್ಟು ಎಂಬುದನ್ನು ಹೇಳುತ್ತೀರಾ ?

ಶ್ರೀ ಆರ್. ಚೆನ್ನಿಗರಾಮಯ್ಯ.—ಜಿಲ್ಲಾವಾರು ವಿವರಗಳೂ ತಯಾರಾಗಿವೆ.

ಶ್ರೀ ಟಿ. ಹನುಮಯ್ಯ.—ಮೊದಲನೆ ಪಂಚವಾರ್ಷಿಕ ಯೋಜನೆಗೆ 35 ಕೋಟಿ ರೂಪಾಯಿಗಳಷ್ಟು ನಿಗದಿ ಮಾಡಿದ್ದರೂ, ಹರಿಜನರಿಗೆ ಕೇವಲ ಲಕ್ಷಗಳಲ್ಲಿ ಅಂದರೆ, 3 ಲಕ್ಷ, 5 ಲಕ್ಷ, 7 ಲಕ್ಷ—ಹೀಗೆ ಕೊಟ್ಟು, ಅದರಲ್ಲೂ ಅರ್ಧಭಾಗ ಕೂಡ ಖರ್ಚು ಮಾಡದಿರುವುದನ್ನು ನೋಡಿದರೆ ಸರ್ಕಾರದವರ ಮನೋಭಿಪ್ರಾಯ ಯಾವ ರೀತಿಯಿದೆಯೆಂಬುದು ವ್ಯಕ್ತವಾಗುತ್ತದಲ್ಲವೇ !

Sri R. CHENNIGARAMIAH.—It is a matter of oppinion. ಖರ್ಚಾಗುವುದಕ್ಕೆ ನಾನಾ ಕಾರಣಗಳಿವೆ.

ಶ್ರೀ ಟಿ. ಹನುಮಯ್ಯ.—ಖರ್ಚಾಗದಿರುವುದಕ್ಕೆ ಕಾರಣಗಳೇನು ? ನಾನಾ ಕಾರಣಗಳಿವೆಯೆಂದು ಹೇಳಿದರಲ್ಲಾ.

ಶ್ರೀ ಆರ್. ಚೆನ್ನಿಗರಾಮಯ್ಯ.—ಒಂದು ಕಾರಣವೆಂದರೆ, ಈ ಯೋಜನೆಗಳಲ್ಲಿ ನಾನಾ ರೀತಿಯಲ್ಲಿ ಖಾಸಗಿ ಜನರಿಂದಲೂ ಪ್ರಯತ್ನಗಳು ಆಗಬೇಕಾಗಿರುತ್ತದೆ. Poultry farmಗೆ, ಸಾಲ ಕೊಡುವ ಸಂದರ್ಭವಿರುತ್ತದೆ. ಸಂಬಂಧಪಟ್ಟ ಜನರೇ ಮುಂದೆ ಬಂದು ಕೇಳದೆ ಇದ್ದರೆ, ಅಥವಾ ತಡ ಮಾಡಿದರೆ ನಿಧಾನವಾಗುತ್ತದೆ. ಹೀಗೆ ನಾನಾ ಕಾರಣಗಳಿರುತ್ತವೆ.

ಶ್ರೀ ಟಿ. ಹನುಮಯ್ಯ.—ಸಾಲವನ್ನು ಕೊಡಬೇಕೆಂದು ಹೇಳಿದರಲ್ಲಾ, ಸರ್ಕಾರದ ಜಮೀನುಗಳನ್ನಿಟ್ಟುಕೊಂಡಿರುವವರಿಗೆ ಅಲ್ಲವೇ ತಾವು ಸಾಲ ಕೊಡುವುದು ?

ಶ್ರೀ ಆರ್. ಚೆನ್ನಿಗರಾಮಯ್ಯ.—ತಮ್ಮ ಪ್ರಶ್ನೆ ಅರ್ಥವಾಗಲಿಲ್ಲ.

ಶ್ರೀ ಟಿ. ಹನುಮಯ್ಯ.—ಸರ್ಕಾರಿ ಇಲಾಖೆಗಳವರು ಸಾಲ ಕೊಡಬೇಕಾದರೆ ಜಮೀನುಗಳ ಆಧಾರದ ಮೇಲೆ ಕೊಡಬೇಕೆಂದು ಹೇಳುತ್ತಾರೆ. ಅಂದರೆ ಸಾಲ ಕೇಳಬೇಕಾದರೆ ಜಮೀನಿದ್ದಿರಬೇಕು ತಾನೆ ?

ಶ್ರೀ ಆರ್. ಚೆನ್ನಿಗರಾಮಯ್ಯ.—ಮಾನ್ಯ ಸ್ನೇಹಿತರು ಕೊಟ್ಟಿರತಕ್ಕ ಕಾರಣದಿಂದಲೇ ಹಣ ಖರ್ಚಾಗಿಲ್ಲವೆಂದು ಹೇಳಬಹುದು.

ಶ್ರೀ ಟಿ. ಹನುಮಯ್ಯ.—ಈ ಕಷ್ಟವನ್ನು ನಿವಾರಣೆ ಮಾಡಲು ಏನು ಮಾಡಿದ್ದೀರಿ ?

ಶ್ರೀ ಆರ್. ಚೆನ್ನಿಗರಾಮಯ್ಯ.—ಯೋಚನೆ ಮಾಡುತ್ತೇವೆ.

ಶ್ರೀ ಜಿ. ದುಗ್ಗಪ್ಪ.—ರಾಜ್ಯದಲ್ಲಿ ಹರಿಜನರ ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿಗಾಗಿ ಸರ್ಕಾರದವರು ಖರ್ಚುಮಾಡಿರುವ ಮೊಬಲಗೆಷ್ಟು ?

ಶ್ರೀ ಆರ್. ಚೆನ್ನಿಗರಾಮಯ್ಯ.—1,70,848 ರೂಪಾಯಿಗಳು ಮತ್ತು 4,00,157 ರೂಪಾಯಿಗಳೆಂದು ಉತ್ತರದಲ್ಲೇ ಒದಗಿಸಿದೆ.

Sri M. CHIKKALINGAIAH.—On a point of order, Sir. ಈಗ ಸರ್ಕಾರದವರು ಉತ್ತರದಲ್ಲಿ ಒದಗಿಸಿರತಕ್ಕ ಅಂಕಿಅಂಶಗಳು ಸರಿಯಾಗಿಲ್ಲ. ಮೊದಲನೆಯ ಮತ್ತು ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ ಈ ಕಾರ್ಯಗಳಿಗಾಗಿ ಎಷ್ಟೆಷ್ಟು ಮೊಬಲಗನ್ನು ತೆಗೆದಿಡಲಾಗಿತ್ತೆಂಬುದನ್ನು ಈ ಉತ್ತರದಲ್ಲಿ ಸರಿಯಾಗಿ ತೋರಿಸಿಲ್ಲ. ಈ ಅಂಕಿ ಅಂಶಗಳು ತಪ್ಪಾಗಿ ಬಿದ್ದಿರುತ್ತವೆ. ಆದಕಾರಣ ಸರ್ಕಾರದವರು ಈ ಅಂಕಿ ಅಂಶಗಳನ್ನು ಮತ್ತೊಮ್ಮೆ ಪರಿಶೀಲನೆ ಮಾಡಿದ ನಂತರ ಈ ಪ್ರಶ್ನೆಯನ್ನು ಚರ್ಚೆಗೆ ತೆಗೆದುಕೊಳ್ಳುವುದು ಒಳ್ಳೆಯದೆಂದು ಹೇಳುತ್ತೇನೆ.

Sri Kadidal MANJAPPA.—Sir, with your permission I want to say that I believe there is some thing wrong with the answer furnished. It has created an impression that the Government of Mysore have spent only these sums for the amelioration of the Scheduled Castes people. We have spent at the rate of nearly 20 lakhs every year. Therefore it is better it is taken up tomorrow.

Mr. SPEAKER.—It may be taken up tomorrow. I hope the supplementaries will be much less tomorrow than they are today after the full information is furnished.

Sri G. DUGGAPPA.—Not satisfied, Sir.

Mr. SPEAKER.—You will be satisfied tomorrow.

---

## Opening of a High School at Srirampur.

*Q.*—151. Sri V. R. NAIDU (Malleswaram)·—

Will the Government be pleased to state :—

(*a*) whether they have received representations from the public for the opening of a High School at Srirampur ;

(*b*) if so, what necessary steps have been taken in that regard ?

*A.*—Sri Kadidal MANJAPPA (Minister for Education)·—

(*a*) Yes.

(*b*) A private High School has been opened at Srirampur.

ಶ್ರೀ ವಿ. ಆರ್. ನಾಯ್ಡು.—ಈ ರೀತಿ ಎಷ್ಟು ಕಾಲದಿಂದ ಶ್ರೀರಾಂಪುರದಲ್ಲಿ ಒಂದು ಸರ್ಕಾರಿ ಹೈಸ್ಕೂಲನ್ನು ತೆರೆಯಲು ಸಾರ್ವಜನಿಕರಿಂದ ಮನವಿಗಳು ಬರುತ್ತಿವೆ ?

ಶ್ರೀ ಕಡಿದಾಳ್ ಮಂಜಪ್ಪ.—ಈ ವಿಚಾರದಲ್ಲಿ ಪ್ರಶ್ನೆ ಕೇಳುತ್ತಿರುವ ಮಾನ್ಯ ಸದಸ್ಯರೇ ಆಗಾಗ್ಗೆ ಮನವಿಮಾಡಿಕೊಳ್ಳುತ್ತಿದ್ದಾರೆ.

ಶ್ರೀ ವಿ. ಆರ್. ನಾಯ್ಡು.—ಈ ರೀತಿ ಉತ್ತರ ಕೊಡತಕ್ಕದ್ದು ಸರ್ಕಾರದ ನೀತಿಯೇನು ?